**S.C. 53/2024.**

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.

## ಸತ್ರ ಮೊಕದ್ದಮೆ ಸಂಖ್ಯೆ 53/2024.

| | | | |
|---|---|---|---|
| ಹೆಸರು | : | ಪ್ರವೀಣ ಹಳೆಮನಿ | ಫ್ರಾಸಾ-07 |
| ತಂದೆಯ ಹೆಸರು | : | ಹುಲಿಗೆಪ್ಪ | ಚಾಸಾ-08 |
| ವಯಸ್ಸು | : | 27 ವರ್ಷ | |
| ಉದ್ಯೋಗ | : | ಕೂಲಿ | |
| ವಾಸಸ್ಥಳ | : | ಕರಡಿ | |

ದಿನಾಂಕಃ 30-01-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಆರೋಪಿತರು ಪರಿಚಯ. ಮೃತ ಬಸವರಾಜ ವಗ್ಗರ ಪರಿಚಯವಿಲ್ಲ. ಚಾಸಾ-7 ಪರಿಚಯವಿಲ್ಲ.

ಈಗ ಒಂದು ದಾಖಲೆ ನೋಡುತ್ತಿದ್ದು ಅದರ ಮೇಲಿನ ಸಹಿ ನನ್ನದೇ ಇದ್ದು ಅದನ್ನು ನಿಪಿ-8 ಅಂತಾ ಗುರುತಿಸಲಾಗಿದ್ದು, ಸಹಿಯನ್ನು ನಿಪಿ-8(ಬಿ) ಅಂತಾ ಗುರುತಿಸಲಾಯಿತು. ಸ್ಥಳದಲ್ಲಿ 6 ಪೋಟೋಗಳನ್ನು ತೆಗೆದಿದ್ದು ಅದರಲ್ಲಿ ಒಂದನ್ನು ನಿಪಿ-11 ಅಂತಾ ಗುರುತಿಸಲಾಗಿದ್ದು ಇನ್ನುಳಿದ ಪೋಟೋಗಳನ್ನು ನಿಪಿ-17 ರಿಂದ 21 ಅಂತಾ ಗುರುತಿಸಲಾಯಿತು. ಅವುಗಳನ್ನು ಯಾವ ವಿಷಯಕ್ಕೆ ತೆಗೆದಿದ್ದಾರೆ ನನಗೆ ಗೊತ್ತಿಲ್ಲ. ಸದರಿ ಜಪ್ತ ಪಂಚನಾಮೆ ನಿಪಿ-8 ರಲ್ಲಿ ಬರೆದ ವಿಷಯ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ, ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾ.ಅ.ರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಪ್ರತಿಕೂಲ ಸಾಕ್ಷ್ಯ ನೀಡಿರುವುದು ಮನದಟ್ಟಾಗಿರುವುದರಿಂದ, ಕೋರಿರುವ ಅನುಮತಿಯನ್ನು ನೀಡಲಾಯಿತು)

**ಪಾಟಿಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ.**

ದಿನಾಂಕಃ 03-05-2024 ರಂದು ನನ್ನನ್ನು ಹಾಗೂ ಚಾಸಾ-4 ರವರನ್ನು ಇಳಕಲ್ ಪೊಲೀಸಠಾಣೆಗೆ ಕರೆಯಿಸಿ ಅಲ್ಲಿ 4 ನೇ ಆರೋಪಿ ಇವನನ್ನು ತೋರಿಸಿ ವಿಚಾರಣೆಗೆ ಒಳಪಡಿಸಿದಾಗ ಕೊಲೆ ಮಾಡಿದ ವಿಚಾರ ಒಪ್ಪಿಕೊಂಡು ತನ್ನ ಜೊತೆ ಬಂದಲ್ಲಿ ಸ್ಥಳ ಹಾಗೂ ವಸ್ತುಗಳನ್ನು ತೋರಿಸುವುದಾಗಿ ಹೇಳಿ ಒಪ್ಪಿಕೊಂಡಿದ್ದು ನಂತರ

ನಮ್ಮನ್ನು ಹಾಗೂ ಆರೋಪಿತರನ್ನು ಪೊಲೀಸಠಾಣೆಯಿಂದ ಮುಂಜಾನೆ 7.45 ಗಂಟೆಗೆ ಕರೆದುಕೊಂಡು ನಂದವಾಡಗಿಯ ಬ್ರಿಡ್ಜ ಹತ್ತಿರವಿರುವ ಹಳ್ಳದ ಸೇತುವೆ ಹತ್ತಿರ ಇರುವ ಗುನ್ಹಾ ನಡೆದ ಸ್ಥಳಕ್ಕೆ ಹೋಗಿ ಅಲ್ಲಿ ಬಸವರಾಜ ಈತನ ಮೋಟರ್ ಸೈಕಲ್ ನಿಲ್ಲಿಸಿ ಕಟ್ಟಿಗೆ ಬಡಿಗೆಯಿಂದ ಹೊಡೆದ ಸ್ಥಳದಲ್ಲಿ ಪಂಚನಾಮೆ ಜರುಗಿಸಿದ್ದಾರೆ ಎನ್ನುವುದು ಸರಿಯಲ್ಲ.

ನಂತರ ಕಾಲ್ನಡಿಗೆಯಲ್ಲಿ ನೀರಿನ ಹರಿವಿನ ಹತ್ತಿರ ಕರೆದುಕೊಂಡು ಬಂದು ಅಲ್ಲಿ ಒಂದು ಜಾಲಿ ಕಟ್ಟಿಗೆಯನ್ನು ತೆಗೆದುಕೊಂಡ ಬಗ್ಗೆ ಸ್ಥಳ ತೋರಿಸಿದ ಎನ್ನುವುದು ಸರಿಯಲ್ಲ. ಸದರಿ ಸ್ಥಳದಲ್ಲಿ ಪಂಚನಾಮೆ ಮಾಡಿದ್ದಾರೆ ಎನ್ನುವುದು ಸರಿಯಲ್ಲ. ಆರೋಪಿತನು ಸ್ವಲ್ಪ ದೂರದಲ್ಲಿ ಶ್ರೀಗಂಧದ ಬಡಿಗೆಯನ್ನು ಮುರಿದುಕೊಂಡ ಜಾಗೆ ಅಂತಾ ತೋರಿಸಿದ್ದಾನೆ ಎನ್ನುವುದು ಸರಿಯಲ್ಲ.

ನಂತರ ಕರಡಿ ಗ್ರಾಮದ ಅಂಬೇಡ್ಕರ ಸರ್ಕಲ್ ಬಳಿ ಕರೆದುಕೊಂಡು ಹೋಗಿ ಅಲ್ಲಿ ಕೊಲೆಗೆ ಒಳಸಂಚು ಮಾಡಿದ ಜಾಗೆ ಅಂತಾ ತೋರಿಸಿದ್ದು ಅಲ್ಲಿಯೂ ಸಹ ಪಂಚನಾಮೆ ಮಾಡಿ ಒಟ್ಟು ಮುಂಜಾನೆ 7.45 ರಿಂದ 12.00 ಗಂಟೆವರೆಗೆ ಬೇರೆ ಬೇರೆ ಸ್ಥಳಗಳಿಗೆ ಕರೆದುಕೊಂಡು ಹೋಗಿ ಆರೋಪಿ ತೋರಿಸಿದ ಘಟನಾ ಸ್ಥಳದಲ್ಲಿ ಪಂಚನಾಮೆ ಜರುಗಿಸಿದ್ದಾರೆ ಎನ್ನುವುದು ಸರಿಯಲ್ಲ. ನಿಪಿ-8 ಓದಿ ತಿಳಿದು ನಿಪಿ-8(ಬಿ) ಅಂತಾ ಸಹಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ-11,17 ರಿಂದ 21 ಫೋಟೋ ತೆಗೆದಿದ್ದಾರೆ ಎನ್ನುವುದು ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

30-01-2026
ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.

**S.C. 53/2024.**

**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.**

**ಸತ್ರ ಮೊಕದ್ದಮೆ ಸಂಖ್ಯೆ 53/2024.**

| | | | |
|---|---|---|---|
| ಹೆಸರು | : | ಯಲ್ಲಪ್ಪ ಚಲವಾದಿ | ಫ್ರಾಸಾ-06 |
| ತಂದೆಯ ಹೆಸರು | : | ಹೊಳೆಪ್ಪ | ಚಾಸಾ-06 |
| ವಯಸ್ಸು | : | 56 ವರ್ಷ | |
| ಉದ್ಯೋಗ | : | ಕೂಲಿ | |
| ವಾಸಸ್ಥಳ | : | ಕರಡಿ | |

ದಿನಾಂಕಃ 30-01-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಮೃತ ಬಸವರಾಜ ವಗ್ಗರ ಪರಿಚಯವಿಲ್ಲ. ಚಾಸಾ-7 ಪರಿಚಯ. ಆರೋಪಿ-1 ಪರಿಚಯ. ಉಳಿದ ಆರೋಪಿತರು ಪರಿಚಯವಿಲ್ಲ.

ಈಗ ಒಂದು ದಾಖಲೆ ನೋಡುತ್ತಿದ್ದು ಅದರ ಮೇಲಿನ ಸಹಿ ನನ್ನದೇ ಇದ್ದು ಅದನ್ನು ನಿಪಿ-12 ಅಂತಾ, ಸಹಿಯನ್ನು ನಿಪಿ-12(ಎ) ಅಂತಾ ಗುರುತಿಸಲಾಯಿತು. ಸ್ಥಳದಲ್ಲಿ 4 ಪೋಟೋಗಳನ್ನು ತೆಗೆದಿದ್ದು ಅವುಗಳನ್ನು ನಿಪಿ-13 ರಿಂದ 16 ಅಂತಾ ಗುರುತಿಸಲಾಯಿತು. ಅವುಗಳನ್ನು ಯಾವ ವಿಷಯಕ್ಕೆ ತೆಗೆದಿದ್ದಾರೆ ನನಗೆ ಗೊತ್ತಿಲ್ಲ. ಸದರಿ ಜಪ್ತ ಪಂಚನಾಮೆ ನಿಪಿ-12 ರಲ್ಲಿ ಬರೆದ ವಿಷಯ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ, ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾ.ಅ.ರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಪ್ರತಿಕೂಲ ಸಾಕ್ಷ್ಯ ನೀಡಿರುವುದು ಮನದಟ್ಟಾಗಿರುವುದರಿಂದ, ಕೋರಿರುವ ಅನುಮತಿಯನ್ನು ನೀಡಲಾಯಿತು)

**ಪಾಟಿಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ.**

ದಿನಾಂಕಃ 02-05-2024 ರಂದು ನನ್ನ ಹಾಗೂ ಚಾಸಾ-7 ರವರನ್ನು ಇಳಕಲ್ ಪೊಲೀಸಠಾಣೆಗೆ ಕರೆಯಿಸಿ ಅಲ್ಲಿ 1ನೇ ಆರೋಪಿ ಮಾರುತಿ ಭಜಂತ್ರಿ ಇವನನ್ನು ತೋರಿಸಿ ವಿಚಾರಣೆಗೆ ಒಳಪಡಿಸಿದಾಗ ಕೊಲೆ ಮಾಡಿದ ವಿಚಾರ ಒಪ್ಪಿಕೊಂಡು ತನ್ನ ಜೊತೆ ಬಂದಲ್ಲಿ ಕೊಲೆ ಮಾಡಲು ಉಪಯೋಗಿಸಿದ ಬಡಿಗೆ ಹಾಗೂ ಸ್ಥಳವನ್ನು ತೋರಿಸುವುದಾಗಿ ಹೇಳಿ ಒಪ್ಪಿಕೊಂಡಿದ್ದು ನಂತರ ನಮ್ಮನ್ನು ಹಾಗೂ ಆರೋಪಿತರನ್ನು

ಪೊಲೀಸಠಾಣೆಯಿಂದ ಮುಂಜಾನೆ 6.45 ಗಂಟೆಗೆ ಕರೆದುಕೊಂಡು ನಂದವಾಡಗಿಯ ಬ್ರಿಡ್ಜ ಹತ್ತಿರವಿರುವ ಹಳ್ಳದ ಸೇತುವೆ ಹತ್ತಿರ ಹೋಗಿ ಅಲ್ಲಿ ಗಿಡಗಳ ಕಂಟಿಯಲ್ಲಿ ಒಗೆದ ಒಂದು ಕಟ್ಟಿಗೆ ಬಡಿಗೆಯನ್ನು ತೋರಿಸಿ ಅದೇ ಬಡಿಗೆಯಿಂದ ಬಸವರಾಜನಿಗೆ ಹಲ್ಲೆ ಮಾಡಿದ್ದೇನೆ ಎಂದು ತೋರಿಸಿದ ಎನ್ನುವುದು ಸರಿಯಲ್ಲ. ಪೊಲೀಸರು ಸದರಿ ಬಡಿಗೆಯನ್ನು ಪಂಚನಾಮೆ ಅಡಿಯಲ್ಲಿ ಅಮಾನತುಪಡಿಸಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ.

ನಂತರ ಕಾಲ್ನಡಿಗೆಯಲ್ಲಿ ನೀರಿನ ಹರಿವಿನ ಹತ್ತಿರ ಕರೆದುಕೊಂಡು ಬಂದು ಅಲ್ಲಿ ಒಂದು ಶ್ರೀಗಂಧದ ಮರದಿಂದ ಕಟ್ಟಿಗೆಯನ್ನು ಮುರಿದುಕೊಂಡ ಬಗ್ಗೆ ಸ್ಥಳ ತೋರಿಸಿದ ಎನ್ನುವುದು ಸರಿಯಲ್ಲ. ಸದರಿ ಸ್ಥಳದಲ್ಲಿ ಪಂಚನಾಮೆ ಮಾಡಿದ್ದಾರೆ ಎನ್ನುವುದು ಸರಿಯಲ್ಲ.

ನಂತರ ಕರಡಿ ಗ್ರಾಮದ ಅಂಬೇಡ್ಕರ ಸರ್ಕಲ್ ಬಳಿ ಕರೆದುಕೊಂಡು ಹೋಗಿ ಅಲ್ಲಿ ಕೊಲೆಗೆ ಒಳಸಂಚು ಮಾಡಿದ ಜಾಗೆ ಅಂತಾ ತೋರಿಸಿದ್ದು ಅಲ್ಲಿಯೂ ಸಹ ಪಂಚನಾಮೆ ಮಾಡಿ ಒಟ್ಟು ಮುಂಜಾನೆ 6.45 ರಿಂದ ಬೇರೆ ಬೇರೆ ಸ್ಥಳಗಳಿಗೆ ಕರೆದುಕೊಂಡು ಹೋಗಿ ಆರೋಪಿ ತೋರಿಸಿದ ಘಟನಾ ಸ್ಥಳ ಹಾಗೂ ಕಟ್ಟಿಗೆ ಬಡಿಗೆಯನ್ನು ಪಂಚನಾಮೆ ಜರುಗಿಸಿ ಅಮಾನತುಪಡಿಸಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ. ನಿಪಿ-12 ಓದಿ ತಿಳಿದು ನಿಪಿ-12(ಎ) ಅಂತಾ ಸಹಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ-13 ರಿಂದ 15 ಪೋಟೋ ತೆಗೆದಿದ್ದಾರೆ ಎನ್ನುವುದು ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

30-01-2026
ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.